

ಗಾಳಿಗಿಂತಲೂ ಹಗುರವಾದ, ಗಾಜಿಗಿಂತ ಪಾರದರ್ಶಕವಾದ, ಕೂದಲಿಗಿಂತ ನೂರುಪಾಲು ಸೂಕ್ಷ್ಮವಾದ ಜೇಡ ಹೆಚ್ಚಿನ ಸಂದರ್ಭದಲ್ಲಿ ನಮ್ಮ ಕಣ್ಣಿಗೆ ಕಾಣುವುದೇ ಇಲ್ಲ. ಇವುಗಳ ಬಗ್ಗೆ ನಮ್ಮ ಅರಿವು ಅಷ್ಟಕ್ಕಷ್ಟೆ? ಇಲ್ಲಿದೆ ಒಂದಿಷ್ಟು ಮಾಹಿತಿ.

ಚಿತ್ರ-ಲೇಖನ:
**ಪುಟ್ಟರಾಜು ಕೈಗಾ**

# ವಿನ್ಯಾಸಗಾರ ಜೇಡ



**ನಾ**ವು ಜೇಡರ ಬಲೆಯನ್ನು ಸಾಮಾನ್ಯವಾಗಿ ಮನೆಯ ಸೂರಿನಲ್ಲಿ, ನಾಲ್ಕು ಗೋಡೆಯ ಸಂದು ಗೊಂದುಗಳಲ್ಲಿ, ಮನೆಯ ಅಂಗಳದ ಹೂ ತೋಟದಲ್ಲಿ ಗಿಡದಿಂದ ಗಿಡಕ್ಕೆ ನೇಡುವ ಜೋಕಾಲಿಯಂತೆ ತೇಲಾಡುವ ಬಲೆಯಾಗಿ ನೋಡಿ ಬಲ್ಲೆವು. ಇವುಗಳ ವೀಕ್ಷಣೆಗೆ ಕಾಡುಗಳೇ ಬೇಕೆಂದೇನೂ ಇಲ್ಲ. ಬಟ್ಟ ಬಯಲು ಪ್ರದೇಶದಲ್ಲೂ ನಾವು ಸೂರ್ಯೋದಯಕ್ಕೂ ಮುಂಚೆ ಬಯಲಲ್ಲಿ ಗಾಳಿ ಸೇವನೆಗೆ ಹೊರಟರೆ ಅಲ್ಲಲ್ಲೆ ಹುಲ್ಲಿನ ಮೇಲೆ ಮಂಜನ್ನು ಹೊದ್ದು, ಹಿಮಾಲಯದ ಮಂಜನ್ನು ನೆನಪಿಸುವಂತೆ ಕಾಣುತ್ತದೆ. ಅಂದರೆ ಈ ಬ್ರಹ್ಮಾಂಡದ ಯಾವ ಮೂಲೆಗೆ ಹೋದರೂ ಈ ಜೇಡಗಳು ಕೋಟ್ಯಾಂತರ ಮೈಲಿ ಉದ್ದದ ತಮ್ಮ ನಾಭಿ ತಂತುಗಳಿಂದ ಇಡೀ ಬ್ರಹ್ಮಾಂಡವನ್ನು ಸುತ್ತುವರೆದಿದೆ ಎಂದರೆ ತಪ್ಪಾಗಲಾರದು.

ಬರೀ ಹುಲ್ಲನ್ನಷ್ಟೆ ತಮ್ಮ ರೇಷ್ಮೆ ವಸ್ತ್ರದಿಂದ ಹೊದಿಸುವುದಿಲ್ಲ. ಹುಲ್ಲು ಇಲ್ಲದ ಕಡೆ ನೆಲಕ್ಕೆ ಹಾಸಿಗೆಯನ್ನು ಹಾಸಿದಂತೆ ನೇಯುತ್ತದೆ. ಒಣ ಕಡ್ಡಿಯನ್ನು ಬಿಡದಂತೆ ಒಂದಕ್ಕೊಂದು ಹೊಸದಿರುವಂತೆ ಮಾಡುತ್ತದೆ. ಸರ್ವಂ ಜೇಡರ ಜಾಲ ಮಯಂ ಎನ್ನುವಂತೆ ತೋರುತ್ತದೆ. ಇವುಗಳು ಹೆಣೆಯುವ ಬಲೆಗಳು, ಸೊಳ್ಳೆ, ಪತಂಗ, ಮಿಡತೆ, ನೊಣ ಮತ್ತು ಇತರೆ ಅಸಂಖ್ಯಾ ಕೀಟಗಳ ಪಾಲಿಗೆ ಯಮಪಾಶದ ಚಕ್ರವ್ಯೂಹ. ಇಂತಹ ಕಲಾತ್ಮಕ ಬಲೆಗಳು

(8ನೇ ಪುಟ ನೋಡಿ)